ದಿನಾಂಕಃ **08.06.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್.ಟಿ.ಟಿ. ವಕೀಲರಿಂದಃ

ನಾನು ಪಿಯುಸಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ವಾದಿ ನಮ್ಮ ಗ್ರಾಮದವರು ಆಗಿರುತ್ತಾರೆ. ಆದರೆ ಸಂಬಂಧಿಕರು ಆಗಿರುವುದಿಲ್ಲ. ದಾವಾ ಸ್ವತ್ತಿನ ಖಾತೆ ನಂ.139. ಪೂರ್ವ ಪಶ್ಚಿಮ 31 ಅಡಿ, ಉತ್ತರ ದಕ್ಷಿಣ 15 ಅಡಿ ಇರುತ್ತದೆ. ಪೂರ್ವಕ್ಕೆ ಗಂಗಪ್ಪನವರ ಮನೆ , ಪಶ್ಚಿಮಕ್ಕೆ ಗುಟ್ಟೆ ಉತ್ತರಕ್ಕೆ ಗುಟ್ಟೆ ದಕ್ಷಿಣಕ್ಕೆ ರಸ್ತೆ. ದಾವಾ ಸ್ವತ್ತು ಮೂಲತಃ ಸರ್ಕಾರಿ ಸ್ವತ್ತಾಗಿರುತ್ತದೆ. ಅಲ್ಲಿ ನಾರಾಯಣಮ್ಮನವರೆ ಮನೆ ಕಟ್ಟಿಕೊಂಡಿರುತ್ತಾರೆ. ಆದರೆ ಅವರಿಗೆ ಆಸ್ತಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾರಾಯಣಮ್ಮ ವಾದಿಗೆ ನೊಂದಾಯಿತ ಧಾನಪತ್ರ ಬರೆದುಕೊಟ್ಟಿರುತ್ತಾರೆ ಸದರಿ ಧಾನಪತ್ರದಲ್ಲಿ ಬರೆದಿರುವಂತಹ ಎಲ್ಲಾ ಅಂಶಗಳನ್ನು ನಿಖರವಾಗಿ ಹೇಳಲು ಆಗುವುದಿಲ್ಲ. ಸದರಿ ಧಾನಪತ್ರವು ಯಾವ ಉದ್ದೇಶಕ್ಕಾಗಿ ನಮೂದು ಮಾಡಿ ಬರೆದುಕೊಟ್ಟಿರುತ್ತಾರೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ ನಾರಾಯಣಮ್ಮರವರ ಮಗಳ ವಿಧ್ಯಾಭ್ಯಾಸದ ಉದ್ದೇಶಕ್ಕಾಗಿ ಬರೆದುಕೊಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ.

2. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ದಿಃ25.05.2014 ರ ದಾಖಲೆಯ ಮೇಲೆ ಧಾನಪತ್ರ ಎಂದು ನಮೂದು ಮಾಡಿರುತ್ತಾರೆ ಸದರಿ ಧಾನಪತ್ರ ಎಲ್ಲಿ ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಧಾನಪತ್ರಕ್ಕೆ ನನ್ನನ್ನು ಹೊರತು ಪಡಿಸಿ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಧಾನಪತ್ರ ಬರೆಯುವ ಸಮಯದಲ್ಲಿ ಯಾವ ಯಾವ ದಾಖಲೆ ಇಟ್ಟುಕೊಂಡಿದ್ದರು ಎಂದು ನನಗೆ

Shivakumar B C

08/6/2026

ಗೊತ್ತಿರುವುದಿಲ್ಲ. ವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂಬುದಕ್ಕೆ ಇ-ಖಾತೆ ಮತ್ತು ಕಂದಾಯ ಪಾವತಿ ರಸೀದಿಯನ್ನು ನೋಡಿರುತ್ತೇನೆ. ಸದರಿ ದಾಖಲೆಗಳ ದಿನಾಂಕ ಹೇಳಲು ಆಗುವುದಿಲ್ಲ.

3. ದಿಃ11.09.2020 ರಂದು ನಾರಾಯಣಮ್ಮ 2 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯಪತ್ರದ ಆಧಾರ ಮೇರೆಗೆ ದಾವಾ ಸ್ವತ್ತಿನಲ್ಲಿ ಅಂದಿನಿಂದಲೂ 2 ನೇ ಪ್ರತಿವಾದಿ ರವಿಕುಮಾರ್ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

Shivakumar B.K

08/6/2026

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ